e) Action is being taken to release the pending subsidy in full to general category pertaining to 2007-08 and 2008-09 and upto 2010-11 in respect of special category during the current year.

ಅನುದಾನ ಮಂಜೂರು

40 (458), ಶ್ರೀ ಮಂಜುನಾಥ್ ಹೆಚ್.ಪಿ.(ಹುಣಸೂರು)

ಪ್ರಶ್ನೆ

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿಗೆ 2008–09 ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ವಿವಿಧ ಯೋಜನೆಗಳಡಿ ಸರ್ಕಾರದಿಂದ ಮಂಜೂರಾದ ಹಣವೆಷ್ಟು; (ಯೋಜನಾವಾರು, ಲೆಕ್ಕಶೀರ್ಷಿಕೆವಾರು ವಿವರ ನೀಡುವುದು) ?

ಆ) ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಹಾಗೂ ಕೈಗಾರಿಕಾ ಸಂಬಂಧ ತರಬೇತಿ ಯೋಜನೆ ಮುಂತಾದ ಇತರೆ ಯೋಜನೆಗಳನ್ನು ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದ್ದು, ಯಾವುದೇ ವಿಚಾರವು ವಿಧಾನ ಸಭಾ ಸದಸ್ಯರ ಅಥವಾ ಜನಪ್ರತಿನಿಧಿಗಳ ಗಮನಕ್ಕೆ ಬಾರದಂತೆ ಅನುಷ್ಠಾನಗೊಳಿಸಲಾಗಿದೆ. ಆದ್ದರಿಂದ ವಿವಿಧ ಯೋಜನೆಗಳಡಿ ಆಯ್ಕೆಗಾಗಿ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯನ್ನು ರಚಿಸುವ ಕುರಿತು ಮಾಹಿತಿ ಒದಗಿಸುವುದು?

ಶ್ರೀ ನರಸಿಂಹ ನಾಯಕ ರಾಜುಗೌಡ (ಸಣ್ಣ ಕೈಗಾರಿಕೆ ಸಚಿವರು)

ಉತ್ತರ

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಹಾಗೂ ಕೈಗಾರಿಕಾ ಸಂಬಂಧ ತರಬೇತಿ ಯೋಜನೆಗಳನ್ನು ಯೋಜನೆಗಳ ಮಾರ್ಗ ಸೂಚಿಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಧಾನ ಮಂತ್ರಿ ಉದ್ಯೋಗ ಸೃಜನೆ ಯೋಜನೆಯಡಿ ಪಲಾನುಭವಿಗಳ ಆಯ್ಕೆ ಸಮಿತಿಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳ ಸದಸ್ಯರು ಇರುತ್ತಾರೆ.

Reply

a) Details are enclosed in the annexure.

b) Financial assistance and industrial training programmes are being implemented as per the guidelines of the schemes. There are representatives os Zilla panchayat, Taluk panchayat, and Grama panchayat in the Selection Committee for selection of beneficiaries under the Prime Minister's Employment Generation Scheme.

ಅನುಬಂಧ

ಕ್ರ ಸಂ	ವರ್ಷ	ಯೋಜನೆ/ಲೆಕ್ಕ ಶೀರ್ಷಿಕೆ	ಸವಲತ್ತುವಿತರಣೆ	ಹಂಚಿಕೆಯಾದ ಅನುದಾನ ರೂ. (ಲಕ್ಷಗಳಲ್ಲಿ)	ಉಪಯೋಗಿಸಿದ ಮೊತ್ತ ರೂ.(ಲಕ್ಷಗಳಲ್ಲಿ)	ಷರಾ
1	2008–09	ಗಿರಿಜನ ಉಪಯೋಜನೆ/ 2852–80–003–0–12–423	ವಸತಿ ಕಾರ್ಯಾಗಾರ	20.40	20.40	85 ಗಿರಿಜನ ಕುಶಲಕರ್ಮಿಗಳಿಗೆ ವಸತಿ ಕಾಯಾಗಾರಗಳನ್ನು ನಿರ್ಮಿಸಿಕೊಡಲಾಗಿದೆ. (ಪ್ರತಿ ವಸತಿ ಕಾರ್ಯಾಗಾರದ ವೆಚ್ಚ ರೂ.40,000 ಇದರಲ್ಲಿ ರೂ.24,000ಗಳ ಅನುದಾನ ಮತ್ತು ರೂ.16,000 ಫಲಾನುಭವಿಯ ವಂತಿಕೆ ಇರುತ್ತದೆ)
			ಸುಧಾರಿತ ಉಪಕರಣ	0.75	0.75	15 ಗಿರಿಜನ ಕುಶಲಕರ್ಮಿಗಳಿಗೆ ಕಸೂತಿ/ ಟೈಲರಿಂಗ್ ವೃತ್ತಿಯ ಸುಧಾರಿತ ಉಪಕರಣಗಳನ್ನು ಒದಗಿಸಲಾಗಿದೆ.
2	2009–10	ಗಿರಿಜನ ಉಪಯೋಜನೆ/ 2852–80–003–0–12–423	ವಸತಿ ಕಾರ್ಯಾಗಾರ	5.40	5.40	10 ಗಿರಿಜನ ಕುಶಲಕರ್ಮಿಗಳಿಗೆ ವಸತಿ ಕಾಯಾಗಾರಗಳನ್ನು ನಿರ್ಮಿಸಿಕೊಡಲಾಗಿದೆ. (ಒಂದು ವಸತಿ ಕಾರ್ಯಾಗಾರದ ವೆಚ್ಚ ರೂ.60,000 ಇದರಲ್ಲಿ ರೂ.54,000ಗಳ ಅನುದಾನ ಮತ್ತು ರೂ.6,000 ಫಲಾನುಭವಿಯ ವಂತಿಕೆ ಇರುತ್ತದೆ)
3	2010–11	ಗಿರಿಜನ ಉಪಯೋಜನೆ/ 2852–80–003–0–12–423	ವಸತಿ ಕಾರ್ಯಾಗಾರ	9.00	9.00	10 ಗಿರಿಜನ ಕುಶಲಕರ್ಮಿಗಳಿಗೆ ವಸತಿ ಕಾಯಾಗಾರಗಳನ್ನು ನಿರ್ಮಿಸಿಕೊಡಲಾಗಿದೆ. (ಪ್ರತಿ ವಸತಿ ಕಾರ್ಯಾಗಾರದ ವೆಚ್ಚ ರೂ.1,00,000 ಆಗಿದ್ದು, ಇದರಲ್ಲಿ ರೂ.90,000ಗಳ ಅನುದಾನ ಮತ್ತು ರೂ.10,000 ಫಲಾನುಭವಿಯ ವಂತಿಕೆ ಇರುತ್ತದೆ)
			ಸುಧಾರಿತ ಉಪಕರಣ	1.00	1.00	20 ಗಿರಿಜನ ಕುಶಲಕರ್ಮಿಗಳಿಗೆ ಕಸೂತಿ/ ಟೈಲರಿಂಗ್ ವೃತ್ತಿಯ ಸುಧಾರಿತ ಉಪಕರಣಗಳನ್ನು ಒದಗಿಸಲಾಗಿದೆ.
4	2011–12	ಗಿರಿಜನ ಉಪಯೋಜನೆ/ 2852–80–003–0–12–423	ವಸತಿ ಕಾರ್ಯಾಗಾರ	0.90	0.90	ಒಬ್ಬ ಗಿರಿಜನ ಕುಶಲಕರ್ಮಿಗಳಿಗೆ ವಸತಿ ಕಾಯಾಗಾರಗಳನ್ನು ನಿರ್ಮಿಸಿಕೊಡಲಾಗಿದೆ. (ಪ್ರತಿ ವಸತಿ ಕಾರ್ಯಾಗಾರದ ವೆಚ್ಚ ರೂ.1,00,000 ಇದ್ದು ಇದರಲ್ಲಿ ರೂ.90,000ಗಳ ಅನುದಾನ ಮತ್ತು ರೂ.10,000 ಫಲಾನುಭವಿಯ ವಂತಿಕೆ ಇರುತ್ತದೆ).

ಕ್ರ ಸಂ	ವರ್ಷ	ಯೋಜನೆ/ಲೆಕ್ಕ ಶೀರ್ಷಿಕೆ	ಸವಲತ್ತುವಿತರಣೆ	ಪರಿಚಿಕೆಯಾದ ಅನುದಾನ ರೂ. (ಲಕ್ಷಗಳಲ್ಲಿ)	ಉಪಯೋಗಿಸಿದ ಮೊತ್ತ ರೂ.(ಲಕ್ಷಗಳಲ್ಲಿ)	ಫಲಾ
			ಸುಧಾರಿತ ಉಪಕರಣ	0.70	0.70	14 ಗಿರಿಜನ ಕುಶಲಕರ್ಮಿಗಳಿಗೆ ಬಿದಿರು ವೃತ್ತಿಯ ಸುಧಾರಿತ ಉಪಕರಣಗಳನ್ನು ಒದಗಿಸಲಾಗಿದೆ.
			ಕಚ್ಚಾಮಾಲು	0.50	0.50	10 ಗಿರಿಜನ ಅಗರಬತ್ತಿ ತಯಾರಿಕಾ ಕುಶಲಕರ್ಮಿಗಳಿಗೆ ತಲಾ ರೂ.5000 ರಂತೆ ದುಡಿಮೆ ಬಂಡವಾಳವನ್ನು ಕಚ್ಚಾಮಾಲಿನ ರೂಪದಲ್ಲಿ ಒದಗಿಸಲಾಗಿದೆ.
5		ವಿಶೇಷ ಘಟಕ ಯೋಜನೆ 2852-80-003-0-12-422	ವಸತಿ ಕಾರ್ಯಾಗಾರ	1.80	1.80	ಇಬ್ಬರು ಪರಿಶಿಷ್ಟ ಜಾತಿಯ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲಾಗಿದೆ. (ಪ್ರತಿ ವಸತಿ ಕಾರ್ಯಾಗಾರದ ವೆಚ್ಚ ರೂ.1,00,000 ಇದರಲ್ಲಿ ರೂ.90,000ಗಳ ಅನುದಾನ ಮತ್ತು ರೂ.10,000 ಫಲಾನುಭವಿಯ ವಂತಿಕೆ ಇರುತ್ತದೆ).